**<u>ದಿನಾಂಕ 22.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀಸವಾಲುಃ 1 ನೇ ಪಕ್ಷಗಾರರ ಪರ ಅವರ ಅಧಿಕೃತ ಪ್ರತಿನಿಧಿಯಾದ ಶ್ರೀ.ಎಲ್.ಎಂ.ಪಿ ರವರಿಂದ:**

ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ 2008 ನೇ ಸಾಲಿನಲ್ಲಿ Executive HR ಎಂದು ಕೆಲಸಕ್ಕೆ ಸೇರಿಕೊಂಡಿದ್ದೇನು. ಆ ಸಮಯದಲ್ಲಿ 2 ನೇ ಪಕ್ಷಗಾರರ ಸಂಸ್ಥೆಯಲ್ಲಿ 200 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಆದರೇ 500 ಜನ ಅಲ್ಲ. ಸದರಿ 200 ಜನ ಕಾರ್ಮಿಕರು ಖಾಯಂ ಕಾರ್ಮಿಕರಾಗಿದ್ದರು. 2 ನೇ ಪಕ್ಷಗಾರರ ಸಂಸ್ಥೆಯ ಕಾರ್ಖಾನೆಯೂ 2001 ರಲ್ಲಿ ಮೈಸೂರಿನಲ್ಲಿ ಪ್ರಾರಂಭವಾಗಿತ್ತು. 2008 ನೇ ಸಾಲಿನಲ್ಲಿ 2 ನೇ ಪಕ್ಷಗಾರರ ಸಂಸ್ಥೆಯ ಬೇರೆ ಘಟಕಗಳು ಮೈಸೂರನ್ನು ಹೊರತುಪಡಿಸಿ ಇರಲಿಲ್ಲ. 2008 ನೇ ಸಾಲಿನಲ್ಲಿ 40-50 ಜನ ಗುತ್ತಿಗೆ ಕಾರ್ಮಿಕರು ಕೆಲಸವನ್ನು ಮಾಡುತ್ತಿದ್ದರು. 2008 ನೇ ಸಾಲಿನ ನಂತರ ಖಾಯಂ ನೌಕರರ ಸಂಖ್ಯೆ ಹೆಚ್ಚಳವಾಗಿತ್ತು. 2016-17 ನೇ ಸಾಲಿನಲ್ಲಿ ಸಂಸ್ಥೆಯಲ್ಲಿ ಖಾಯಂ ನೌಕರರ ಸಂಖ್ಯೆ 400 ರಿಂದ 450 ಇದ್ದು, ಅವರು ಕೆಲಸವನ್ನು ಮಾಡುತ್ತಿದ್ದರು. 2016-17 ನೇ ಸಾಲಿನಲ್ಲಿ 200 ಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರ ಕೆಲಸವನ್ನು ನಾವು ವಜಾ ಮಾಡಿದ್ದೇವು ಎನ್ನುವುದು ಸರಿಯಲ್ಲ. ಆದರೇ 80 ಜನ ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಗುತ್ತಿಗೆ ಕೆಲಸವನ್ನು ರದ್ದು ಮಾಡಲಾಗಿತ್ತು. 2008 ನೇ ಸಾಲಿನಲ್ಲಿ 2 ನೇ ಪಕ್ಷಗಾರರ ಸಂಸ್ಥೆಯ ದೃಢೀಕೃತ ಸ್ಥಾಯಿ ಆದೇಶ ಇತ್ತು. ಸದರಿ ದೃಢೀಕೃತ ಸ್ಥಾಯಿ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಸದರಿ ದೃಢೀಕೃತ ಸ್ಥಾಯಿ ಆದೇಶದಲ್ಲಿ ಕಾರ್ಮಿಕರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾವಣೆ ಮಾಡುವ ಕುರಿತು ನಿಯಮ ಇರಲಿಲ್ಲ ಎನ್ನುವುದು ನನಗೆ ನೆನಪಿಲ್ಲ. ಆದರೇ ಕಾರ್ಮಿಕರ ನೇಮಕಾತಿ ಆದೇಶ ಪತ್ರದಲ್ಲಿ ಅಂತಹ ನಿಯಮವನ್ನು ಬರೆಯಲಾಗಿದೆ.

ನಿ.ಎಂ.6 ನೇಮಕಾತಿ ಆದೇಶ ಪತ್ರದ ಅಭಿರಾಮ ಎನ್ನುವ ವ್ಯಕ್ತಿಯೂ ಕೆಲಸಕ್ಕೆ ಯಾವ ಸಮಯದಲ್ಲಿ ಸೇರಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯೂ ನಿ.ಎಂ.6 ದಾಖಲೆಯನ್ನು ನೋಡಿ ದಿಃ01.01.2014 ರಂದು ಕೆಲಸಕ್ಕೆ ಸೇರಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ವ್ಯಕ್ತಿಯ ದಿಃ31.12.2013 ರ ನೇಮಕಾತಿ

ಆದೇಶ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸದರಿ ಎರಡು ದಿನಾಂಕದ ನೇಮಕಾತಿ ಆದೇಶ ಪತ್ರದಲ್ಲಿಯ ಸೇವಾ ಷರತ್ತುಗಳನ್ನು ಸಾಕಷ್ಟು ಬದಲಾವಣೆಗಳನ್ನು ಮಾಡಲಾಗಿದೆ ಎನ್ನುವುದು ನಿಜ. ದಿಃ01.01.2014 ರ ಹೆಚ್ಚುವರಿ ನೇಮಕಾತಿ ಆದೇಶ ಪತ್ರದಲ್ಲಿ ಯಾವ ಯಾವ ಸೇವಾ ಷರತ್ತುಗಳನ್ನು ಸೇರಿಸಲಾಗಿದೆ ಅಥವಾ ಬದಲಾವಣೆ ಮಾಡಲಾಗಿದೆ ಎಂಬುದನ್ನು ಬರೆದಿರುವುದಿಲ್ಲ. ಯಾವ ಯಾವ ಷರತ್ತುಗಳನ್ನು ಬದಲಾವಣೆ ಮಾಡಲಾಗಿದೆ ಎಂದು ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ವೇತನದಲ್ಲಿಯೂ ಸಹ ಬದಲಾವಣೆ ಮಾಡಲಾಗಿತ್ತು ಎನ್ನುವುದು ನನಗೆ ನೆನಪಿಲ್ಲ. ಸದರಿ ಸೇವಾ ಷರತ್ತುಗಳನ್ನು ಬದಲಾವಣೆ ಮಾಡುವ ಸಮಯದಲ್ಲಿ ಕಾರ್ಮಿಕ ಇಲಾಖೆಗೆ ತಿಳಿಸಲಾಗಿತ್ತೋ ಅಥವಾ ಇಲ್ಲವೋ ಎಂದು ನನಗೆ ನೆನಪಿರುವುದಿಲ್ಲ. ಆದರೇ ನೋಟೀಸ್ ಬೋರ್ಡ್ ನಲ್ಲಿ ಕಾರ್ಮಿಕರ ತಿಳುವಳಿಕೆಗೆ ಪ್ರಕಟಿಸಲಾಗಿತ್ತು. ಕಾರ್ಮಿಕರ ಸೇವಾ ಷರತ್ತುಗಳನ್ನು ಬದಲಾವಣೆ ಮಾಡುವ ಸಮಯದಲ್ಲಿ ಕಾರ್ಮಿಕರಿಗೆ ಮತ್ತು ಕಾರ್ಮಿಕ ಇಲಾಖೆಗೆ ತಿಳಿಸಬೇಕಾಗುತ್ತದೆ ಎನ್ನುವುದಕ್ಕೆ ಸಾಕ್ಷಿಯೂ ಕಾರ್ಮಿಕರಿಗೆ ತಿಳಿಸಬೇಕಾಗುತ್ತದೆ. ಆದರೇ ಕಾರ್ಮಿಕ ಇಲಾಖೆಗೆ ತಿಳಿಸಬೇಕು ಎನ್ನುವುದು ನನಗೆ ಗೊತ್ತಿಲ್ಲ. ನಿ.ಎಂ.6 ನೇಮಕಾತಿ ಆದೇಶ ಪತ್ರದಲ್ಲಿ ಸೇವಾ ಷರತ್ತುಗಳಿಗೂ ಮತ್ತು ದೃಢೀಕೃತ ಸ್ಥಾಯಿ ಆದೇಶದ ನಿಯಮಗಳಿಗೂ ವ್ಯತ್ಯಾಸ ಕಂಡುಬಂದಲ್ಲಿ ದೃಢೀಕೃತ ಸ್ಥಾಯಿ ಆದೇಶಗಳನ್ನು ಪಾಲಿಸಬೇಕೆಂದು ನಮೂದಿಸಿದೆ ಎನ್ನುವುದು ನಿಜ. ನಿ.ಎಂ.6 ರಂತಹ ಹೆಚ್ಚುವರಿ ನೇಮಕಾತಿ ಆದೇಶ ಪತ್ರಗಳನ್ನು ಆ ಸಮಯದಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಖಾಯಂ ಕಾರ್ಮಿಕರಿಗೆ ಕೊಟ್ಟಿದ್ದೇವು.

2016 ನೇ ಸಾಲಿನಲ್ಲಿ ಕಾರ್ಖಾನೆಯಲ್ಲಿ Works Committee and Grievance Committee ಇದ್ದವು. ಸದರಿ committee ಗಳಲ್ಲಿ ಸದಸ್ಯರುಗಳನ್ನು ಕಾರ್ಮಿಕರೇ ಗುರುತಿಸಿ ನೇಮಿಸಿಕೊಂಡಿದ್ದರು. ಅದಕ್ಕೆ ಸಂಬಂಧಪಟ್ಟು ನೇಮಿಸಿಕೊಂಡ ಸದಸ್ಯರ ಪಟ್ಟಿಯನ್ನು ಕಾರ್ಮಿಕರು ಕಾರ್ಖಾನೆಗೆ ಕೊಟ್ಟಿರುತ್ತಾರೆ. ಸದರಿ Committee ಗಳ ಸಭೆಗಳನ್ನು ಕಾಲ ಕಾಲಕ್ಕೆ ಮಾಡಲಾಗುತ್ತಿತ್ತು. ಸದರಿ ಸಭೆಗಳ ನಡುವಳಿಕೆಗಳನ್ನು ಬರೆಯಲಾಗಿರುತ್ತದೆ. ಸದರಿ Committee ಗಳು 2002 ರಿಂದಲೇ ಚಾಲನೆಯಲ್ಲಿ ಇದ್ದವು. ಸದರಿ Committee ಗಳಲ್ಲಿಯ ಸದಸ್ಯರುಗಳನ್ನು 2 ವರ್ಷಕ್ಕೊಂದು ಬಾರಿ ಬದಲಾವಣೆ ಮಾಡಿಕೊಳ್ಳುತ್ತಿದ್ದರು.

Works Committee ಯಲ್ಲಿ ಕಾರ್ಖಾನೆಯಲ್ಲಿಯ ಕಾರ್ಮಿಕರ ಕೆಲಸದ ಸ್ಥಳದ, ಉತ್ಪಾದನೆಯ ಮತ್ತು ಸಂಸ್ಥೆಯ ಧ್ಯೆಯೋದ್ದೇಶ ಕುರಿತು ಚರ್ಚಿಸಿಲಾಗುತ್ತಿತ್ತು. Grievance Committee ಯಲ್ಲಿ ಕಾರ್ಮಿಕರ ಕುಂದುಕೊರತೆಗಳ ಕುರಿತು, ಸುರಕ್ಷತೆಯ ಕುರಿತು, ಆಡಳಿತ ಮಂಡಳಿಯ ಸಹಯೋಗ ಮತ್ತು ಇತರೇ ವಿಷಯಗಳ ಕುರಿತು ಚರ್ಚೆಗಳನ್ನು ಮಾಡಲಾಗುತ್ತಿತ್ತು.

ಈ ಸಮಯದಲ್ಲಿ ಶ್ರೀ.ಎಲ್.ಎಂ.ಪಿ ಅವರು ಸಾಕ್ಷಿಯ ಮುಂದಿನ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಆಲಿಸಿ ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

Sd/-

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**